

ವಿಧವೆ ಸೊಸೆಗೆ ಕುಟುಂಬದ ಜೀವನಾಂಶ, ಆಸ್ತಿ ಮತ್ತು ಘನತೆಯ ಹಕ್ಕಿನ ಮೇಲೆ ಸುಪ್ರೀಂ ಕೋರ್ಟ್ ಬರೆದ ಹೊಸ ಭಾಷ್ಯ.

# ವಿಧವೆ ಸೊಸೆ ಹಕ್ಕು ರಕ್ಷಣೆಗೆ ಕಾನೂನಿನ ಅಭಯ

■ **ಮಂಜುಳಾ ಮುನವಳ್ಳಿ**
ಹೈಕೋರ್ಟ್ ವಕೀಲರು ಬೆಂಗಳೂರು

ಭಾರತೀಯ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಕುಟುಂಬ ಎನ್ನುವುದು ಕೇವಲ ರಕ್ತಸಂಬಂಧಗಳ ಬೆಸುಗೆಯಲ್ಲ, ಅದೊಂದು ಆರ್ಥಿಕ ಭದ್ರತೆಯ ಕೋಟೆ ಕೂಡ ಹೌದು. ಆದರೆ, ಈ ಭದ್ರಕೋಟೆಯೊಳಗೆ ಮಹಿಳೆಯ ಸ್ಥಾನಮಾನಗಳು ದಶಕಗಳಿಂದಲೂ ಕೇವಲ ಭಾವನಾತ್ಮಕ ನೆಲೆಗಟ್ಟಿನ ಮೇಲೆಯೇ ತೂಗಾಡುತ್ತಿವೆ. ವಿಶೇಷವಾಗಿ ಪತಿಯ ಅಕಾಲಿಕ ನಿಧನದ ನಂತರ ಮಹಿಳೆಯೊಬ್ಬಳು ಎದುರಿಸುವ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ದೊಡ್ಡ ಸವಾಲಾಗಿ ಪರಿಣಮಿಸಿವೆ. ಈ ಸವಾಲನ್ನು ನೀಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ಸುಪ್ರೀಂ ಕೋರ್ಟ್, 'ಸೊಸೆ ಕೇವಲ ಅತಿಥಿಯಲ್ಲ, ಅವಳು ಕುಟುಂಬದ ಅವಿಭಾಜ್ಯ ಅಂಗ' ಎಂದಿದೆ.

ಇದೇ ಜನವರಿ 15ರಂದು ತನ್ನ ಐತಿಹಾಸಿಕ ತೀರ್ಪಿನಲ್ಲಿ ಈ ಅಂಶವನ್ನು ಎತ್ತಿಹಿಡಿದಿದೆ. ಇದು ಬರೀ ತೀರ್ಪಲ್ಲ, ವಿಧವೆಯಾದ ತಕ್ಷಣ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಕೋಟ್ಯಂತರ ಮಹಿಳೆಯರ ಪಾಲಿಗೆ ಸಂವಿಧಾನಾತ್ಮಕವಾಗಿ ದೊರೆತ ರಕ್ಷಾಕವಚವಾಗಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ಮಾಹಿತಿ ಪ್ರಕಾರ, ಭಾರತದಲ್ಲಿ ಇಂದಿಗೂ ಪ್ರತಿ 9 ನಿಮಿಷಕ್ಕೊಮ್ಮೆ ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ದೈಹಿಕ ಹಿಂಸೆ ಮಾತ್ರವಲ್ಲ, ಪತಿಯ ಸಾವಿನ ನಂತರ ಸೊಸೆಯನ್ನು 'ಆರ್ಥಿಕ ಹೊರೆ' ಎಂದು ಬಿಂಬಿಸಿ ಮನೆಯಿಂದ ಹೊರಹಾಕುವ ಅಥವಾ ಆಕೆಗೆ ಸಲ್ಲಬೇಕಾದ ಜೀವನೋಪಾಯದ ಹಕ್ಕುಗಳನ್ನು ಕಸಿದುಕೊಳ್ಳುವ 'ಆರ್ಥಿಕ ಕ್ರೌರ್ಯ' ಕೂಡ ಸೇರಿದೆ. ಈ ಹಿನ್ನೆಲೆಯಲ್ಲಿ, ಸುಪ್ರೀಂ ಕೋರ್ಟ್ ತೆಗೆದುಕೊಂಡಿರುವ ಈ ಕ್ರಾಂತಿಕಾರಿ ನಿರ್ಧಾರ ಪತಿಯ ಆಸ್ತಿ ಇಲ್ಲದಿದ್ದರೂ ಮಾವನ ಬಳಿಯಿರುವ ಪಿತ್ರಾರ್ಜಿತ ಅಥವಾ ಕುಟುಂಬದ ಜಂಟಿ ಆಸ್ತಿಯಿಂದ ಜೀವನಾಂಶ ಪಡೆಯುವ ಹಕ್ಕನ್ನು ದೃಢಪಡಿಸಿದೆ.

ಮದುವೆಯಾದ ಮಹಿಳೆ ಪತಿಯ ಮರಣದ ನಂತರ ಅನಾಥಳಲ್ಲ ಮತ್ತು ಆಕೆಯನ್ನು ಬೀದಿಗೆ ತಳ್ಳುವುದು ಅಮಾನವೀಯತೆ ಮಾತ್ರವಲ್ಲ ಕಾನೂನಿನ ಅಡಿ ಶಿಕ್ಷಾರ್ಹ ಅಪರಾಧವೂ ಹೌದು ಎಂಬುದನ್ನು ನ್ಯಾಯಾಂಗ ಸಾರಿದೆ.

ಈ ಕಾನೂನು ಹೋರಾಟದ ಪಯಣವು 1985ರ ಶಹಾ ಬಾನು ಬೇಗಂ ಪ್ರಕರಣದಿಂದ ಆರಂಭವಾಗಿ, 2020ರ ರಜನೀಶ್ ವರ್ಸಸ್ ನೇಹಾ ತೀರ್ಪಿನ ಮೂಲಕ ದಾಟಿ ಬಂದು, ಇಂದು 2026ರಲ್ಲಿ ಪೂರ್ಣ ಪ್ರಮಾಣದ ಆರ್ಥಿಕ ಸ್ವಾತಂತ್ರ್ಯದ ರೂಪ ಪಡೆದಿದೆ.

ಹಿಂದೂ ದತ್ತು ಮತ್ತು ಜೀವನಾಂಶ ಕಾಯ್ದೆ (HAMA) 1956ರ ಸೆಕ್ಷನ್ 19ರ ಅಡಿಯಲ್ಲಿ ಈ ಹಕ್ಕನ್ನು ಈಗಾಗಲೇ ಗುರುತಿಸಲಾಗಿದೆಯಾದರೂ, ಇತ್ತೀಚಿನ ಈ ತೀರ್ಪು ವೈಯಕ್ತಿಕ ಮತ್ತು ಕಾನೂನಾತ್ಮಕ ಬಾಧ್ಯತೆಯನ್ನು ಇನ್ನಷ್ಟು ಕಟ್ಟುನಿಟ್ಟಾಗಿಸಿದೆ. ಒಂದು ವೇಳೆ ವಿಧವಾ ಸೊಸೆ ತನ್ನ ಸ್ವಂತ ದುಡಿಮೆಯಿಂದ ಅಥವಾ ತನ್ನ ಪತಿಯ ಆಸ್ತಿಯಿಂದ ಜೀವನ ನಡೆಸಲು ಸಾಧ್ಯವಾಗದಿದ್ದರೆ, ಆಕೆಯನ್ನು ಗೌರವಯುತವಾಗಿ ಸಲಹುವುದು ಮಾವನ ಕರ್ತವ್ಯವೆಂದು ಕಾನೂನು ಹೇಳುತ್ತದೆ. ಇಲ್ಲಿ ಜೀವನಾಂಶ ಎಂದರೆ ಕೇವಲ ಎರಡು ಹೊತ್ತಿನ ಊಟದ ಖರ್ಚಲ್ಲ; ಇದರಲ್ಲಿ ಗೌರವಯುತ ವಾಸದ ಮನೆ (Right to Residence), ವೈದ್ಯಕೀಯ ವೆಚ್ಚ ಮತ್ತು ಆಕೆ ಪತಿ ಬದುಕಿದ್ದಾಗ ಅನುಭವಿಸುತ್ತಿದ್ದ ಕನಿಷ್ಠ ಜೀವನಮಟ್ಟ ಕಾಯ್ದುಕೊಳ್ಳಲು ಅಗತ್ಯ ಆರ್ಥಿಕ ನೆರವು ಸೇರಿದೆ.



ಕಾನೂನು ಪ್ರಕ್ರಿಯೆಯಲ್ಲಿ, ಬಾಧಿತ ಮಹಿಳೆಯರು ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಬಹುದು. ಸುಪ್ರೀಂ ಕೋರ್ಟ್ ಪ್ರಕರಣವು ಅಂತಿಮವಾಗಿ ಇತ್ಯರ್ಥವಾಗುವವರೆಗೆ ಕಾಯುವ ಅನಿವಾರ್ಯತೆಯನ್ನು ದೂರ ಮಾಡಿದೆ; ಅರ್ಜಿಯ ಮೊದಲ ಹಂತದಲ್ಲೇ 'ಮಧ್ಯಂತರ ಜೀವನಾಂಶ' (Interim Maintenance) ಪಡೆಯಲು ಅವಕಾಶ ಕಲ್ಪಿಸಿದೆ. ಅಷ್ಟೇ ಅಲ್ಲದೆ, 'ಆಸ್ತಿಯ ಮೇಲಿನ ಹೊಣೆಗಾರಿಕೆ' ನಿಬಂಧನೆಯಡಿ, ಮಾವನು ತನ್ನ ಆಸ್ತಿಯನ್ನು ಇತರರಿಗೆ ಹಂಚುವ ಮೊದಲೇ ಸೊಸೆಯ ಯೋಗಕ್ಷೇಮಕ್ಕೆ ಬೇಕಾದ ಹಣವನ್ನು ಮೀಸಲಿಡಬೇಕಾಗಿದೆ. ಆಸ್ತಿಯನ್ನು ಮಾರಾಟ ಮಾಡಿದರೂ ಸೊಸೆಯ ಜೀವನಾಂಶ ಹಕ್ಕು ಆ ಆಸ್ತಿಯ ಮೇಲೆ ಮುಂದುವರಿಯುತ್ತದೆ, ಇದು ವಂಚನೆಯ ಪ್ರಯತ್ನಗಳಿಗೆ ಬಲವಾದ ತಡೆ ನೀಡಿದೆ. ಇದು ಕೇವಲ ಆಸ್ತಿ ಹಂಚಿಕೆಯಲ್ಲ, ಬದಲಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು 'ಹಿಂದೂ ಕೋಡ್ ಬಿಲ್' ಮೂಲಕ ಪ್ರತಿಪಾದಿಸಿದ ಮಹಿಳಾ ಸಮಾನತೆಯ ಆಶಯದ ಮುಂದುವರಿದ ಭಾಗ.

'ಗಂಡ ಹೋದ ಮೇಲೆ ಸೊಸೆಗೆ ಆಸ್ತಿ ಮೇಲೆ ಯಾಕೆ ಆಸೆ?' ಎಂದು ಹೀಯಾಳಿಸುವ ಕಟ್ಟುಪಾಡುಗಳಿಗೂ ಈ ತೀರ್ಪು ದೊಡ್ಡ ಪೆಟ್ಟು ನೀಡಿದೆ. ಪತಿಯ ನೆರಳು ಸರಿದಾಗ ಜಗತ್ತು ಕತ್ತಲೆಯಾಗಬಹುದು, ಆದರೆ ಸಂವಿಧಾನ ಮತ್ತು ಕಾನೂನಿನ ಬೆಳಕು ಆ ಮನೆ ಮಗಳನ್ನು ಕೈಬಿಡುವುದಿಲ್ಲ. ಸೊಸೆ ಕೇವಲ ಮನೆಯ ಕೆಲಸಕ್ಕೆ ಬಂದಾಕೆಯಲ್ಲ, ಆ ಕುಟುಂಬದ ಭವಿಷ್ಯದ ಕೊಂಡಿ. ಆಕೆಗೆ ನ್ಯಾಯ ನೀಡುವುದು ಕೇವಲ ಕಾಯ್ದೆಯಲ್ಲ, ಸಮಾಜದ ಪರಮಧರ್ಮ.

2026ರ ಈ ತೀರ್ಪು ಲಕ್ಷಾಂತರ ಮಹಿಳೆಯರ ಬದುಕಿಗೆ ಹಕ್ಕಿನೊಂದಿಗೆ ತಲೆ ಎತ್ತಿ ಬದುಕಲು ಆತ್ಮವಿಶ್ವಾಸ ನೀಡಿದೆ. ಸೊಸೆಗೆ ಆಸ್ತಿಯಲ್ಲಿ ಪಾಲು ನೀಡುವುದು ಭಿಕ್ಷೆಯಲ್ಲ, ಅದು ಆಕೆಯ ಸಾಂವಿಧಾನಿಕ, ನೈತಿಕ ಹಕ್ಕು ಎಂಬುದನ್ನು ಜಗಜ್ಜಾಹೀರು ಮಾಡಿದೆ. ■